

19ನೇ ಶತಮಾನದಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿದ್ದ ಚಿನ್ನದ ಗಣಿಗಾರಿಕೆಯ ಚಿತ್ರ. 1893ರಲ್ಲಿ ಪ್ರಕಟವಾದ ಕಲಾವಿದ ಎಚ್. ಸೀಗೆಲ್‌ರ ಕಲಾಕೃತಿಯನ್ನು ಮರದ ಹಲಗೆಯ ಮೇಲೆ (ವುಡ್ ಎನ್‌ಗ್ರೇವಿಂಗ್) ಮೂಡಿಸಲಾಗಿದೆ.

ಕುಳಿಗಳು – ಅವು ಚಿನ್ನಕ್ಕಾಗಿ ವ್ಯವಸ್ಥಿತವಾಗಿ ಅಗೆದ ಹಳೆಯ 50 ಅಡಿ ಆಳದ ಕುಳಿಗಳು. 1902ರಿಂದ ಹಟ್ಟಿಯಲ್ಲಿ ಚಿನ್ನದ ಗಣಿ ಇರುವುದು ಸರ್ವವಿದಿತ.

ವೇದಕಾಲದಿಂದ ವ್ಯವಸ್ಥಿತವಾಗಿ ಸಂಚಯಿಸಿದ್ದ ನಮ್ಮ ದೇಶದ ಚಿನ್ನ ಈಗ ಎಲ್ಲಿದೆ? ಅದು ಲೂಟಿಯಾಗಿ ಹೋಗಿರಬಹುದೇ? ಮೊದಲು ಘೋರಿ, ಘಜ್ನಿಗಳ ದಂಡಯಾತ್ರೆ – ಪ್ರತಿ ಬಾರಿ ನಡೆದ ಅವರ ಆಕ್ರಮಣದಲ್ಲೂ ಉತ್ತರ ಭಾರತದ ಅನೇಕ ನಗರಗಳಿಂದ, ದೇವಾಲಯಗಳಿಂದ ಚಿನ್ನವನ್ನು ಕೊಳ್ಳೆಹೊಡೆದು ದೇಶದಿಂದ ಹೊರಗೆ ಸಾಗಿಸಿದ್ದರು. ಅದ್ಧಕಾಗಿಯೇ ಮತ್ತೆ ಮತ್ತೆ ದಾಳಿಮಾಡಿರಬಹುದಲ್ಲವೇ?

ಅನಂತರ 200 ವರ್ಷಗಳ ಕಾಲ ದೇಶದ ಜನರನ್ನು ಒಡೆದು ಆಳಿ, ಹಡಗುಗಳಲ್ಲಿ ಇಲ್ಲಿಯ ಚಿನ್ನವನ್ನು ಲೂಟಿಮಾಡಿ ಇಂಗ್ಲೆಂಡಿಗೆ ಹೊತ್ತೊಯ್ಯಲಾಯಿತು. ಈ ಮಹಾಕಾರ್ಯಕ್ಕೆ ಅವರಲ್ಲಿ ಅನೇಕರಿಗೆ ನೈಟ್ ಪದವಿಯನ್ನು 'ಆಳುವ ಮಹಾರಾಣಿಯವರು' ದಯಪಾಲಿಸಿದ್ದರು. ಶಾಂತಿಪ್ರಿಯರಾದ ನಮ್ಮ ದೇಶದವರು ಇದನ್ನು ನೋಡುತ್ತಾ ಅಕ್ಕಪಕ್ಕದ ಸಹೋದರರೊಂದಿಗೆ ಗುದ್ದಾಡುತ್ತಾ ಸಂತೋಷವಾಗಿದ್ದರು.

ಭಾರತೀಯ ಕಾವ್ಯಗಳಲ್ಲಿ ಮೇರು ಪರ್ವತದ ವರ್ಣನೆಗಳು ಅನೇಕ ಕಡೆಗಳಲ್ಲಿ ಬರುತ್ತವೆ. ಅದನ್ನು ಚಿನ್ನದ ಪರ್ವತವಾಗಿಯೇ ಎಲ್ಲ ಕಡೆ ಚಿತ್ರಿಸಿದ್ದಾರೆ. ಅಂತಹ ಒಂದು ಪರ್ವತವೋ ಬೆಟ್ಟವೋ ಇದ್ದಿರಬಹುದು ಎಂದು ಊಹೆ ಮಾಡಬಹುದು ಅಷ್ಟೆ. ಅನೇಕ ಊರುಗಳ ಕೆರೆಗಳನ್ನು ಸಮುದ್ರ ಎಂದು ಕರೆದಂತೆ, (ನಾಗಸಂದ್ರ, ದೇವರಾಯಸಮುದ್ರ, ದ್ವಾರಸಮುದ್ರ, ಮಲ್ಲಸಂದ್ರ ಇತ್ಯಾದಿ) ಚಿನ್ನದ ಉಂಡೆ, ರೇಕುಗಳು ಕಂಡುಬಂದ ಗುಡ್ಡವು ಕಾವ್ಯದಲ್ಲಿ ಮೇರು ಪರ್ವತವಾಗಿರಬಹುದು. ಆದರೆ, ಆ ಚಿನ್ನದ ಬೆಟ್ಟದಿಂದ ಮಳೆಯ ನೀರಿನ ಜೊತೆ ಮಣ್ಣಿನೊಡನೆ ಬಂದ ಚಿನ್ನದ ಉಂಡೆಯೋ ಚಿನ್ನದ ಚೂರೋ ಕಣಿವೆಯಲ್ಲಿ ಹರಿಯುವ ತೊರೆಯ ತಿಳಿನೀರಿನಲ್ಲಿ ಕಣ್ಣಿಗೆ ಕಾಣಿಸುವಂತೆ ಇದ್ದವು ಎಂಬುದನ್ನು ಕಲ್ಪನೆಯಿಂದ ಬರೆದದ್ದಲ್ಲ. ಅಂಥವನ್ನು ನಮ್ಮ ಋಷಿಗಳು ಕಣ್ಣಾರೆ ಕಂಡಿದ್ದು ಯಥಾವತ್ ಬರೆದಿದ್ದಾರೆ ಎನ್ನುವುದು ಈಗ ಸ್ಪಷ್ಟವಾದ ಮೇಲೆ ನಮ್ಮ ಕನ್ನಡದ ಕವಿಗಳು ಈ ಬಗ್ಗೆ ಏನು ಬರೆದಿದ್ದರೆ ಎಂದು ಪರಿಶೀಲಿಸೋಣ.

## ವಿಕ್ರಮಾರ್ಜುನನ ಗೋಲ್ಡ್ ರಶ್!

ತೊರೆಯಲ್ಲಿ ದೊರಕುತ್ತಿದ್ದ ಚಿನ್ನದ ಗಟ್ಟಿಗಳ ಹಾಗು ರೇಕುಗಳ ಬಗ್ಗೆ ಪಂಪನು ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಸ್ಪಷ್ಟವಾದ ಮಾತುಗಳಲ್ಲಿ ಬರೆದಿದ್ದಾನೆ. ಧರ್ಮಜನು ರಾಜಸೂಯ ಯಾಗವನ್ನು ಮಾಡಲು ಉಧ್ಯುಕ್ತನಾಗಿ ಧನ




ಅಂಚೆಚೀಟಿಯಲ್ಲಿ ಕ್ಯಾಲಿಫೋರ್ನಿಯಾ 'ಗೋಲ್ಡ್ ರಶ್'